80ಕ್ಕೂ ಅಧಿಕ ಮಂದಿ ರಕ್ತದಾನ

# ರಾಷ್ಟ್ರೀಯ ಸೇವಾ ಯೋಜನೆ: ಸುವರ್ಣ ಮಹೋತ್ಸವ




ಕಾರ್ಕಳ, ಅ. 3: ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ವಿದ್ಯಾರ್ಥಿಗಳು ಜೀವನಕಲೆ ಕುರಿತು ಅನುಭವ ಪಡೆಯುತ್ತಾರೆ. ಸೌಹಾರ್ದತೆ, ಸಹಕಾರ, ಪರಿಶ್ರಮ, ಸೇವಾ ಮನೋಭಾವವನ್ನು ಮೈಗೂಡಿಸಿಕೊಳ್ಳಲು ಸೇವಾ ಯೋಜನೆ ಸಹಕಾರಿ ಎಂದು ಉಪನ್ಯಾಸಕಿ ಜ್ಯೋತಿ ಎಲ್. ಜನ್ನೆ ಅಭಿಪ್ರಾಯಪಟ್ಟರು.

ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ನಾತಕೋತ್ತರ ವಿಭಾಗದ ವಿದ್ಯಾಧರ ಹೆಗ್ಡೆ ಸಹಾಯಕ ಪ್ರಾಧ್ಯಾಪಕ ಗಣೇಶ್ ಉಪಸ್ಥಿತರಿದ್ದರು.

ಪ್ರಣಮ್ಯಾ ಜೈನ್ ಸ್ವಾಗತಿಸಿ, ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿ ನವೀನ್ ಪ್ರಸ್ತಾವಿಸಿದರು. ಅಜಿತ್ ನಿರೂಪಿಸಿ, ಚಂದ್ರಿಕಾ ವಂದಿಸಿದರು.

ಕಾರ್ಯಕ್ರಮದಂಗವಾಗಿ ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಆಶುಭಾಷಣ, ಆಶುನಟನೆ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅನಂತರ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು.